| O.S 143/2012 | PW-2 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 30.10.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:– ಪ್ರತಿವಾದಿ ಪರ ವಕೀಲರಾದಃ ಶ್ರೀ BMM ರವರಿಂದ:–**

ದಾವಾ ಪತ್ರದ ಸಂಗತಿಗಳು ಮತ್ತು ಲಿಖಿತ ಹೇಳಿಕೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ಎರಡು ಕಡೆಯ ವಿಚಾರಣೆಯಾಗಿ ವಾದ ನಿಗದಿಪಡಿಸಲಾಗಿತ್ತು ಎಂದರೆ ನಿಜ. ನನ್ನ ತಂದೆಗೆ ತಲೆಗೆ ಬಲವಾದ ಪೆಟ್ಟಾಗಿದ್ದು ಅವರ ನ್ಯಾಯಾಲಯದಲ್ಲಿ ನೀಡಿರುವ ವಿಚಾರಗಳು ಸ್ಪಷ್ಟವಾಗಿ ಇಲ್ಲದೆ ಇರುವ ಕಾರಣ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ನನ್ನ ತಂದೆ ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಿರುವ ಬಗ್ಗೆ ಸ್ಪಷ್ಟವಾಗಿ ಇರದೆ ಇರುವ ಕಾರಣ ನಾನು ಮುಂದುವರೆದ ಸಾಕ್ಷ್ಯ ವಿಚಾರಣೆ ಮಾಡುತ್ತಿದ್ದೇನೆ.

ನಾನು D.Ed ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಎರಡು ಓದಲು ಬರುತ್ತದೆ. ಸಾಕ್ಷಿಗೆ ನಿಡಿ–26 ದಾಖಲಾತಿಯನ್ನು ತೋರಿಸಿದ್ದು ಸದರಿ ದಾಖಲಾತಿಯ ಪ್ರಕಾರ ನನ್ನ ತಾತನಿಗೆ ದಾವಾ ಆಸ್ತಿ ಐಟಂ ನಂ.3 ನನ್ನ ತಾತನ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನನ್ನ ತಂದೆ ಒಟ್ಟು ಕುಟುಂಬದ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆಯ ತಾಯಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆ ಒಟ್ಟು ಕುಟುಂಬದಲ್ಲಿ ಇದ್ದರು ಎಂಬುದರ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಪಡಿತರ ಚೀಟಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿ ಪರ ದಾಖಲಾತಿಗಳನ್ನು ತೋರಿಸಿದ್ದು ಅದರಲ್ಲಿ ಪಡಿತರ ಚೀಟಿ ಇಲ್ಲ ಎಂದು ನುಡಿದಿರುತ್ತಾರೆ ಸಾಕ್ಷಿ ಮುಂದುವರೆದು ವಂಶವೃಕ್ಷವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಂಶವೃಕ್ಷ ಒಟ್ಟು ಕುಟುಂಬದವನ್ನು ತೋರಿಸುವ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.3 ರ ಸರ್ವೆ ನಂಬರ್ ಗೊತ್ತಿಲ್ಲ. ಸಾಕ್ಷಿಗೆ ನಿಡಿ–23 ನ್ನು ತೋರಿಸಿದ್ದು ಐಟಂ ನಂ.3 ರ ಆಸ್ತಿಗೆ ಮಾಡಿರುವ ವಿಲುನಾಮೆ ಎಂದರೆ ಸಾಕ್ಷಿಯು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ದಾವೆ

ವಿಚಾರಣೆಗೆ ಬಾಕಿ ಇದ್ದಾಗಲೇ ವಿಲುನಾಮೆಯನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಐಟಂ ನಂ.3 ರ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ.

ನಿಡಿ–23 ರ ಬಗ್ಗೆ ಒಂದು ವರ್ಷದ ಹಿಂದೆ ನನಗೆ ಗೊತ್ತಾಗಿರುತ್ತದೆ. 2014 ನೇ ಸಾಲಿನಲ್ಲಿ ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಹಾಜರು ಮಾಡುವ ಸಂದರ್ಭದಲ್ಲಿ ನಿಡಿ–23 ರ ಬಗ್ಗೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಿತ್ತು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲದಿದ್ದರೂ ಸಾಕ್ಷ್ಯ ವಿಚಾರಣೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರಕ್ಕೆ ನಾವು Rejoinder ಹಾಕಿರುವುದಿಲ್ಲ ಎಂದರೆ ಗೊತ್ತಿಲ್ಲ. ನನ್ನ ತಾಯಿಯ ತಾಯಿ ಕೆಂಪಮ್ಮ ರವರ ಮನೆಯಲ್ಲಿ ನಾವು ಮತ್ತು ನಮ್ಮ ಕುಟುಂಬ ವಾಸವಿರುತ್ತೇನೆ ಎಂದರೆ ನಿಜ. ನನ್ನ ತಂದೆಯ ತಾಯಿ ಕೆಂಪಮ್ಮರವರಿಗೆ ಗಂಡುಮಕ್ಕಳ ಸಂತಾನ ಇರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ತಾಯಿಯ ತಾಯಿ ಕೆಂಪಮ್ಮನಿಗೆ ಗಂಡುಮಕ್ಕಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಕೆಂಪಮ್ಮನಿಗೆ ಸರ್ವೆ ನಂಬರ್ 728 ರಲ್ಲಿ 3 ಗುಂಟೆ ಮತ್ತು 261/1 ರಲ್ಲಿ 36 ಗುಂಟೆ ಆಸ್ತಿ ಇತ್ತು ಎಂದರೆ ನಿಜ. ಅದೇ ರೀತಿ 37X37 ಚದರ ಅಡಿ ಇರಿಯೂರಿನಲ್ಲಿ ಮನೆ ಇತ್ತು ಎಂದರೆ ನಿಜ. RCC ಯಲ್ಲಿ ಲಗತ್ತಿಸಿರುವಂತೆ ಖಾಲಿ ಜಾಗ ಇದೆ ಎಂದರೆ ನಿಜ. ಸದರಿ ಕೆಂಪಮ್ಮ ಮೃತಪಟ್ಟಿರುತ್ತಾರೆ ಎಂದರೆ ನಿಜ. ಸದರಿ ಆಸ್ತಿಗಳು ವಾದಿ ಮತ್ತು ಪ್ರತಿವಾದಿ 2 ರಿಂದ 4 ರವರ ನಡುವೆ  ಭಾಗಾಂಶ ಆಗಿರುವುದಿಲ್ಲ ಎಂದರೆ ಭಾಗ ಆಗಲು ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಕೆಂಪಮ್ಮನ ಆಸ್ತಿಗಳ ಸಂಬಂಧ ನನ್ನ ತಂದೆಯವರು ಖರೀದಿ ಮಾಡಿರುವ ಕ್ರಯಪತ್ರ ಇರುತ್ತದೆ. ಕೆಂಪಮ್ಮ ಜೀವಿತಾ ಕಾಲದಲ್ಲಿ ಆಸ್ತಿಗಳನ್ನು ಯಾರಿಗೂ ಸಹ ಕ್ರಯ ಮಾಡಿರುವುದಿಲ್ಲ ಮತ್ತು ಸದರಿ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿ ನಂ.2 ರಿಂದ 4 ರವರಿಗೆ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

| O.S 143/2012 | PW-2 |
|---|---|

1 ನೇ ಪ್ರತಿವಾದಿ ಅವರ ಸೊಸೆಗೆ ಸ್ವಇಚ್ಛೆಯಿಂದ ಬರೆದುಕೊಟ್ಟಿರುತ್ತಾರೆ ಎಂದರೆ ಅವರು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯು ಸಾಕ್ಷಿ ಹೇಳಿದರೂ ಸಹ ಅವರ ಸಾಕ್ಷ್ಯ ದಾವೆಗೆ ಬಾದಕವಾಗಿರುವುದರಿಂದ ನಾನು ಹೆಚ್ಚುವರಿ ಸಾಕ್ಷ್ಯ ನೀಡಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಿಲುನಾಮೆಯ ಆಧಾರದ ಮೇಲೆ 5 ನೇ ಪ್ರತಿವಾದಿ ದಾವಾ ಆಸ್ತಿಯ ಐಟಂ. ನಂ.3 ರಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ನಿಜ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.